ಗಮನ ಸೆಳೆಯುವಂತಹ ಸೂಚನೆ

ಕರ್ನಾಟಕ ರೇಷ್ಮೆ ಕೃಷಿ ಅಭಿವೃದ್ಧಿ ವಿಶ್ವ ಬ್ಯಾಂಕಿನ ಹಣಕಾಸಿನ ಕಡಿತದಿಂದ ಕುಂಠಿತವಾಗಿರುವುದು.

ಶ್ರೀ ಜಿ. ರಾಜಶೇಖರಗೌಡ (ಹಾನೂರು).—ಮಾನ್ಯ ಅಧ್ಯಕ್ಷರೆ, ಕರ್ನಾಟಕ ರೇಷ್ಮೆ ಕೃಷಿ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ ಮಾನ್ಯ ರೇಷ್ಮೆ ಖಾತೆಯ ಮಂತ್ರಿಗಳ ಗಮನಸೆಳೆಯಲು ಇಚ್ಛಿಸುತ್ತೇನೆ.

ಶ್ರೀ ವೈ. ಕೆ. ರಾಮಯ್ಯ (ರೇಷ್ಮೆ ಖಾತೆ ರಾಜ್ಯ ಸಚಿವರು).—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರ ಗಮನ ಸೆಳೆಯುವ ಸೂಚನೆಗೆ ಹೇಳಿಕೆಯನ್ನು ಕೊಡಬಯಸುತ್ತೇನೆ.

ಕರ್ನಾಟಕ ರೇಷ್ಮೆ ಕೃಷಿ ಅಭಿವೃದ್ಧಿ ಯೋಜನೆಯನ್ನು ಕಾರ್ಯಗತಗೊಳಿಸುವ ಬಗ್ಗೆ.

ಮಾನ್ಯ ರೇಷ್ಮೆ ರಾಜ್ಯ ಸಚಿವರ ಹೇಳಿಕೆ.

ಕರ್ನಾಟಕ ರೇಷ್ಮೆ ಅಭಿವೃದ್ಧಿ ಯೋಜನೆಯನ್ನು ಈ ಕೆಳಕಂಡ ಗುರಿಸಾಧನೆಗಾಗಿ ವಿಶ್ವಬ್ಯಾಂಕ್ ಆರ್ಥಿಕ ನೆರವಿನ ಅನ್ವಯ ಕೈಗೆತ್ತಿಕೊಳ್ಳಲಾಗಿತ್ತು.

೧. ಕಚ್ಚಾರೇಷ್ಮೆಯ ಉತ್ಪಾದನೆಯನ್ನು ೨,೭೦೦ ಮೆಟ್ರಿಕ್ ಟನ್‌ನಿಂದ ೪,೫೦೦ ಮೆಟ್ರಿಕ್ ಟನ್‌ಗಳಿಗೆ ಹೆಚ್ಚಿಸುವುದು.

೨. ಕಚ್ಚಾರೇಷ್ಮೆ ಹಾಗೂ ಸ್ಪನ್ ರೇಷ್ಮೆಯ ಗುಣಮಟ್ಟವನ್ನು ಉತ್ತಮಪಡಿಸಲು ಸೌಲಭ್ಯಗಳನ್ನು ರೂಢಿಸಿಕೊಳ್ಳುವುದಕ್ಕಾಗಿ ಯಂತ್ರೋಪಕರಣಗಳ ಆಧುನೀಕರಣ ಮಾಡುವುದು.

೩. ಈ ಯೋಜನೆಯನ್ವಯ ರೂಪಿಸಲಾದ ಅನೇಕ ಕಾರ್ಯಕ್ರಮಗಳಿಗನುಗುಣವಾಗಿ ಸಂಶೋಧನಾ ವ್ಯವಸ್ಥೆಯನ್ನು ರೂಪಿಸುವುದು ಮತ್ತು ಇರುವ ಸಂಶೋಧನಾ ಚಟುವಟಿಕೆಗಳನ್ನು ಬಲಪಡಿಸುವುದು.

ಈ ಯೋಜನೆಯನ್ವಯ ಒಟ್ಟು ಅಂದಾಜು ವೆಚ್ಚ ೭೯.೮೫ ಕೋಟಿಗಳು. ೧೯೮೦-೮೧ ರಿಂದ ೧೯೮೫-೮೬ರ ಅವಧಿಯಲ್ಲಿ ಬಳಸಲು ಉದ್ದೇಶಿಸಲಾಗಿತ್ತು. ೧೯೮೫ ಮಾರ್ಚ್ ೩೧ಕ್ಕೆ ಈ ಯೋಜನೆ ಪೂರ್ಣಗೊಳ್ಳಬೇಕಾಗಿತ್ತು. ಆದರೆ ಈ ಯೋಜನೆಯನ್ನು ೧೯೮೫ ಏಪ್ರಿಲ್‌ನಿಂದ ೧೯೮೬ ಸೆಪ್ಟೆಂಬರ್ ವರೆಗೆ ಅಂದರೆ ೧೪ ವರ್ಷಗಳವರೆಗೆ ವಿಂಗಡಿಸಲಾಗಿದೆ. ೧೯೮೬ ಡಿಸೆಂಬರ್ ಅಂತ್ಯದಲ್ಲಿ ಈ ಬಾಬ್ತಿನ ಲೆಕ್ಕಪತ್ರ ಮುಕ್ತಾಯಗೊಳ್ಳಬೇಕಿದೆ.

ಕಳೆದ ಮೂರು ವರ್ಷಗಳಿಂದ ಗಳಿಸಿದ ಅನುಭವದ ಹಿನ್ನಲೆಯಲ್ಲಿ ಯೋಜನೆಯನ್ನು ಪುನರ್ವಿಶೀಲಿಸಿ ಮಧ್ಯಕಾಲಿಕ ಯೋಜನೆಯನ್ನು ಸಿದ್ಧಪಡಿಸಲಾಗಿದೆ. ಈ ಮಧ್ಯಕಾಲಿಕ ಯೋಜನೆಯಲ್ಲಿ ಬಿತ್ತನೆ ಕ್ಷೇತ್ರದಲ್ಲಿ ಬಿತ್ತನೆ ಕೋಠಿಗಳ ಸ್ಥಾಪನೆ, ಮಾರುಕಟ್ಟೆಗಳ ಸ್ಥಾಪನೆ, ಪಿಷ್ ಮತ್ತು ಪಿಷ್ ಫಾರಂಗಳ ಸ್ಥಾಪನೆ ಇತ್ಯಾದಿಗಳನ್ನು ಮೂಲ ಯೋಜನೆಗೆ ಹೆಚ್ಚುವರಿಯಾಗಿ ಅಳವಡಿಸಲಾಗಿದೆ.

ಪುನಃ ಪರಿಶೀಲನೆಗೊಂಡ ಯೋಜನೆ (ಮಧ್ಯಕಾಲಿಕ ಯೋಜನೆ)ಯಲ್ಲಿ ಒಂದೂವರೆ ವರ್ಷಗಳ ಅವಧಿಗೆ ಅನ್ವಯವಾಗುವಂತೆ ೨೮೪೨.೫೩ ಲಕ್ಷ ರೂಪಾಯಿಗಳ ಅಗತ್ಯವಿದ್ದು ಈ ಪೈಕಿ ೧೯೮೫-೮೬ಕ್ಕೆ ೧೫೯೦.೧೮ ಲಕ್ಷ ರೂಪಾಯಿಗಳೆಂದೂ ೧೯೮೬-೮೭ ಕ್ಕೆ ೧೪೫೨.೩೫ ಲಕ್ಷ ರೂಪಾಯಿಗಳೆಂದೂ ವಿಂಗಡಿಸಲಾಗಿದೆ.

ಕರ್ನಾಟಕ ರೇಷ್ಮೆ ಅಭಿವೃದ್ಧಿ ಯೋಜನೆಯನ್ನು ಪೂರ್ಣಗೊಳಿಸಲು ಸಾಕಷ್ಟು ಹಣಬೇಕಾಗಿದೆ ಯೆಂಬುದು ಸರ್ಕಾರದ ಗಮನದಲ್ಲಿದ್ದು, ಈಗ ರೂಪಿಸಿರುವ ಎಲ್ಲ ಕಾರ್ಯಕ್ರಮಗಳನ್ನು ಪೂರ್ಣಗೊಳಿಸಲಾಗುವುದು.

ಪಂತೊಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛಪಡುತ್ತೇನೆ. ವಿಷಯವನ್ನು ಕನ್ನಡದಿಂದ ಇಂಗ್ಲೀಷ್‌ಗೆ ತರ್ಜುಮೆ ಮಾಡುವಾಗ ಅದು ಸರಿಯಾದ ಅರ್ಥಕೊಡುವ ರೀತಿಯಲ್ಲಿ ತರ್ಜುಮೆ ಮಾಡಿಲ್ಲ. ಕನ್ನಡದಲ್ಲಿ ಏನು ಕೊಟ್ಟಿದ್ದೇವೆ, ಅದನ್ನು ಇಂಗ್ಲೀಷ್‌ಗೆ ತರ್ಜುಮೆ ಮಾಡಿದಾಗ